ಶ್ರೀ ಹನುಮಂತಪ್ಪ ವೈ ಆಲ್ಕೋಡ್ (ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

947 (1028) ಶ್ರೀ ರವಿ ಸಿ ಟಿ (ಚಿಕ್ಕಮಗಳೂರು) ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ರಾಜ್ಯದಲ್ಲಿ ಕ್ರೀಡಾಭಿವೃದ್ಧಿಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು,

ಆ) ಈ ಕಾರ್ಯಕ್ಕಾಗಿ ಸರ್ಕಾರ ಒದಗಿಸಿರುವ ಅನುದಾನ ಎಷ್ಟು, (ಜಿಲ್ಲಾವಾರು ವಿವರ ನೀಡುವುದು)

ಇ) ನೂತನ ಕ್ರೀಡಾಂಗಣಗಳನ್ನು ನಿರ್ಮಿಸುವ ಉದ್ದೇಶ ಸರ್ಕಾರಕ್ಕಿದೆಯೇ,

ಈ) ಚಿಕ್ಕಮಗಳೂರು ಜಿಲ್ಲೆಯಲ್ಲಿ ನಿರ್ಮಿಸಲು ಉದ್ದೇಶಿಸಿರುವ ಕ್ರೀಡಾಂಗಣಗಳೆಷ್ಟು? (ಕ್ಷೇತ್ರವಾರು ವಿವರ ನೀಡುವುದು)

ಶ್ರೀ ಹನುಮಂತಪ್ಪ ವೈ ಆಲ್ಕೋಡ್ (ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು)

ಅ) ರಾಜ್ಯದಲ್ಲಿ ಕ್ರೀಡಾಭಿವೃದ್ಧಿಗೆ ಸಂಬಂಧಿಸಿದಂತೆ ಸರ್ಕಾರವು ಕೆಳಕಂಡಂತೆ ಕ್ರಮ ವಹಿಸಿದೆ

ಎ) ಇಪ್ಪತ್ತು ಜಿಲ್ಲಾ ಕ್ರೀಡಾಂಗಣಗಳನ್ನು ನಿರ್ಮಿಸಲಾಗಿದೆ .

ಬಿ) 6 ನೂತನ ಜಿಲ್ಲಾ ಕ್ರೀಡಾಂಗಣಗಳ ನಿರ್ಮಾಣ ಪ್ರಗತಿ ಹಂತದಲ್ಲಿದೆ

ಸಿ) ತಾಲ್ಲೂಕು ಮಟ್ಟದ ಕ್ರೀಡಾಂಗಣಗಳನ್ನು ನಿರ್ಮಿಸಲಾಗುತ್ತಿದ್ದು (176 ತಾಲ್ಲೂಕುಗಳಲ್ಲಿ ಜಿಲ್ಲಾ ಕ್ರೀಡಾಂಗಣಗಳಿರುವ ತಾಲ್ಲೂಕುಗಳು ಸೇರಿದಂತೆ) ಇವುಗಳಲ್ಲಿ 29 ತಾಲ್ಲೂಕು ಕ್ರೀಡಾಂಗಣಗಳು ಪೂರ್ಣಗೊಂಡಿರುತ್ತದೆ 12ನೇ ಹಣಕಾಸು ಆಯೋಗದ ಅನುದಾನದಡಿ ಮೊದಲನೇ ಹಂತವಾಗಿ 63 ತಾಲ್ಲೂಕುಗಳ ಕ್ರೀಡಾಂಗಣಗಳ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ ಇನ್ನುಳಿದ ತಾಲ್ಲೂಕು ಕ್ರೀಡಾಂಗಣಗಳ ನಿರ್ಮಾಣವನ್ನು ಜಮೀನು ಗುರುತಿಸಿದ ನಂತರ ಹಂತ ಹಂತವಾಗಿ ನಿರ್ಮಿಸಲು ಯೋಜಿಸಲಾಗಿದೆ

ಡಿ) 50 ಕೇಂದ್ರಗಳಿಗೆ ಮಲ್ಟಿಜಿಮ್ ವಿತರಿಸಲು ಕ್ರಮ ತೆಗೆದುಕೊಳ್ಳಲಾಗಿರುತ್ತದೆ 9 ಒಳಾಂಗಣ ಕ್ರೀಡಾಂಗಣಗಳನ್ನು ನಿರ್ಮಿಸಲಾಗಿದ್ದು, ಧಾರವಾಡ, ಬಿಜಾಪುರ ಮತ್ತು ಶಿವಮೊಗ್ಗ ಜಿಲ್ಲೆಗಳ ಒಳಾಂಗಣ ಕ್ರೀಡಾಂಗಣಗಳ ನಿರ್ಮಾಣವು ಪ್ರಗತಿ ಹಂತದಲ್ಲಿದೆ ಚಿಕ್ಕಮಗಳೂರು, ದಾವಣಗೆರೆ ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ ಈಜುಕೊಳ ನಿರ್ಮಿಸಲಾಗಿದೆ ಹಾಗೂ ರಾಯಚೂರಿನಲ್ಲಿ ನಿರ್ಮಾಣ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ 2 ಕ್ರೀಡಾ ವಸತಿ ಶಾಲೆ ಮತ್ತು 5 ಕ್ರೀಡಾ ನಿಲಯಗಳನ್ನು ಸ್ಥಾಪಿಸಿದೆ ಪ್ರಸಕ್ತ ಸಾಲಿನಲ್ಲಿ 23 ಜಿಲ್ಲಾ ಕ್ರೀಡಾ ಶಾಲೆಗಳನ್ನು ತೆರೆಯಲು ಕ್ರಮ ತೆಗೆದುಕೊಳ್ಳಲಾಗಿದೆ

ಆ) ಅನುಬಂದ–ಅ ನಲ್ಲಿ ಲಗತ್ತಿಸಿದೆ

ಇ) 6 ನೂತನ ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾ ಕ್ರೀಡಾಂಗಣ ನಿರ್ಮಾಣ ಪ್ರಗತಿ ಹಂತದಲ್ಲಿದ್ದು, ಕ್ರೀಡಾಂಗಣವಿಲ್ಲದೇ ಇರುವ ತಾಲ್ಲೂಕು ಕೇಂದ್ರಗಳಲ್ಲಿ ಉಚಿತವಾಗಿ ನಿವೇಶನ ದೊರಕಿದಲ್ಲಿ ನೂತನ ಕ್ರೀಡಾಂಗಣಗಳನ್ನು 12ನೇ ಹಣಕಾಸು ಆಯೋಗದಡಿಯಲ್ಲಿ ಹಂತಹಂತವಾಗಿ ನಿರ್ಮಿಸಲು ಉದ್ದೇಶಿಸಲಾಗಿದೆ

ಈ) ಚಿಕ್ಕಮಗಳೂರು ಜಿಲ್ಲೆಯ ಕಡೂರು, ಮೂಡಿಗರೆ, ನರಸಿಂಹರಾಜಮರ ಈ ತಾಲ್ಲೂಕುಗಳಲ್ಲಿ ಕ್ರೀಡಾಂಗಣಗಳಿದ್ದು, ತರೀಕೆರೆ (2008–09) ಮತ್ತು ಶೃಂಗೇರಿ (2007–08) ತಾಲ್ಲೂಕುಗಳಲ್ಲಿ ಕ್ರೀಡಾಂಗಣಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ ಕೊಪ್ಪ ತಾಲ್ಲೂಕಿನಲ್ಲಿ ಸೂಕ್ತ ನಿವೇಶನ ದೊರೆತ ನಂತರ ತಾಲ್ಲೂಕು ಕ್ರೀಡಾಂಗಣ ನಿರ್ಮಾಣವನ್ನು 12ನೇ ಹಣಕಾಸು ಆಯೋಗದ ಅನುದಾನದಡಿ (2009–10ರಲ್ಲಿ) ಕೈಗೆತ್ತಿಕೊಳ್ಳಲಾಗುವುದು

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಸಿ ಟಿ ರವಿ, ಇವರ ಚಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1028ಕ್ಕೆ ಅನುಬಂಧ

ಅನುಬಂಧ–ಅ

(ರೂ ಲಕ್ಷಗಳಲ್ಲಿ)

ಕ್ರ ಸಂ	ಜಿಲ್ಲೆ	ರಾಜ್ಯ ವಲಯ ದಿಂದ	ಕೇಂದ್ರ ಸರ್ಕಾರ ದಿಂದ ಎಸಿಎ*	ಜಿಲ್ಲಾ ಪಂಚಾ ಯತ್	ಸಾರ್ವಜನಿಕ ವಂತಿಕೆ
1	ಬೆಂಗಳೂರು ಗ್ರಾ	10 00	1 00	–	2 93

1	2	3	4	5	6
2	ಕೋಲಾರ	10 02	1 64	–	6 16 4 66
3	ತುಮಕೂರು	10 00	0 25	–	5 83
4	ಚಿತ್ರದುರ್ಗ	10 00	3 60	–	14 50
5	ದಾವಣಗೆರೆ (ನೂತನ ಜಿಲ್ಲೆ)	55 00	179 00 + 30 00	–	20 00
6	ಶಿವಮೊಗ್ಗ	10 80	4 92	–	2 00 5 00
7	ಮೈಸೂರು	25 02	17 50	–	25 50
8	ಮಂಡ್ಯ	10 00	1 00	–	10 20
9	ಹಾಸನ	10 00	3 00	–	10 55
10	ದಕ್ಷಿಣ ಕನ್ನಡ	10 00	2 50	–	7 99
11	ಚಿಕ್ಕಮಗಳೂರು	13 50	5 00	8 99	7 41
12	ಉಡುಪಿ	22 00	191 00*	11 64	2 00 46 00
13	ಕೊಡಗು	10 00	5 40	8 99	23 70
14	ಚಾಮರಾಜನಗರ (ನೂತನ ಜಿಲ್ಲೆ)	15 50	170 00*	–	4 61 65 00
15	ಬಳಗಾಂ	2 00	0 50	–	6 21 00 41
16	ಧಾರವಾಡ	10 50	0 50	–	31 00
17	ಗದಗ್ (ನೂತನ ಜಿಲ್ಲೆ)	25 00	12 00 240 00*	10 00	51 50
18	ಸಿರಸಿ	15 00	15 00	1 00	8 44 1 00
19	ಹಾವೇರಿ (ನೂತನ ಜಿಲ್ಲೆ)	25 00	10 00 285 00*	5 70	25 00

1	2	3	4	5	6
20	ಬಿಜಾಮರ	10 00	5 40	–	30 00 28 00
21	ಬಾಗಲಕೋಟೆ (ನೂತನ	60 00	12 50 25 00*	–	–
22	ಗುಲ್ಬರ್ಗಾ	10 00	1 00	–	10 00
23	ರಾಯಚೂರು	10 00	–	–	10 00
24	ಬಳ್ಳಾರಿ	8 00	–	–	9 78 2 50
25	ಬೀದರ್	15 00	0 10	–	24 53
26	ಕೊಪ್ಪಳ (ನೂತನ ಜಿಲ್ಲೆ)	25 00	130 00*	–	3 25 (ಕೂಕಾ)
27	ಬೆಂಗಳೂರು ನಗರ	ಶ್ರೀ ಕಂಠೀರವ ಕ್ರೀಡಾಂಗಣವನ್ನು ಕ್ರೀಡಾಂಗಣ ನಿರ್ವಹಣಾ ಸಮಿತಿಯು ನಿರ್ವಹಿಸುತ್ತದೆ			

ಎ ಸಿ ಎ* ಕೇಂದ್ರ ಸರ್ಕಾರದ ಹೆಚ್ಚುವರಿ ಅನುದಾನ ಮಂಜೂರಾದ ವಿವರ

II 63 ತಾಲ್ಲೂಕು ಮಟ್ಟದ ಕ್ರೀಡಾಂಗಣ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲು 12ನೇ ಹಣಕಾಸಿನ ಅನುದಾನದಿಂದ ಪೂರ್ಣಗೊಳಿಸಲು ರೂ 21 78 ಕೋಟಿ ಅನುದಾನ ಒದಗಿಸಲಾಗಿದೆ ಹಾಗೂ 50 ಮಲ್ಟಿಜಿಮ್ ನಿರ್ಮಾಣಕ್ಕಾಗಿ ರೂ 150 00 ಲಕ್ಷ ಅನುದಾನ ಒದಗಿಸಿದೆ

III ಪ್ರಸಕ್ತ ಸಾಲಿನಲ್ಲಿ ಧಾರವಾಡ ಒಳಾಂಗಣ ಕ್ರೀಡಾಂಗಣಕ್ಕಾಗಿ ರೂ 45 00 ಲಕ್ಷ ಹಾಗೂ ಬಿಜಾಮರ ಒಳಾಂಗಣ ಕ್ರೀಡಾಂಗಣ ನಿರ್ಮಾಣಕ್ಕಾಗಿ ರೂ 70 00 ಲಕ್ಷ ಒದಗಿಸಲಾಗಿದೆ

IV ಕ್ರೀಡಾ ವನತಿ ಶಾಲೆ ಕ್ರೀಡಾ ನಿಲಯಕ್ಕಾಗಿ ಹಾಗೂ ರೂ 67 13 ಲಕ್ಷ ಒದಗಿಸಲಾಗಿದೆ

V ಪ್ರಸಕ್ತ ಸಾಲಿನಲ್ಲಿ 23 ಕ್ರೀಡಾ ಶಾಲೆಯನ್ನು ತೆರೆಯಲು ರೂ 3 00 ಕೋಟಿ ಅನುದಾನ ಒದಗಿಸಲಾಗಿದೆ

VI ಚಿಕ್ಕಮಗಳೂರಿನ ಜಿಲ್ಲೆಯಲ್ಲಿ ರೂ 65 00 ಲಕ್ಷದಲ್ಲಿ ಈಜುಕೊಳ ನಿರ್ಮಾಣ, ದಾವಣಗೆರೆ ಜಿಲ್ಲೆಗೆ ರೂ 209 00 ಲಕ್ಷಗಳು (ಒಳಾಂಗಣ ಕ್ರೀಡಾಂಗಣ ಹಾಗೂ ಈಜುಕೊಳ ನಿರ್ಮಾಣಕ್ಕಾಗಿ ಒದಗಿಸಲಾಗಿದೆ) ಬಾಗಲಕೋಟೆ ಜಿಲ್ಲೆಗೆ ರೂ 12 50 ಲಕ್ಷ ಈಜುಕೊಳ ನಿರ್ಮಿಸಲು ಅನುದಾನ ಒದಗಿಸಿದೆ

VII ಚಿಕ್ಕಮಗಳೂರಿನಲ್ಲಿ ಟೆನ್ನಿಸ್ ಅಂಕಣವನ್ನು ರೂ 25 00 ಲಕ್ಷಗಳಲ್ಲಿ ನಿರ್ಮಿಸಲಾಗಿದೆ

948 (1086) ಶ್ರೀ ರವಿ ಸಿ ಟಿ (ಚಿಕ್ಕಮಗಳೂರು) ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ಸುವರ್ಣ ಕರ್ನಾಟಕ ವರ್ಷಾಚರಣೆ ಪ್ರಯುಕ್ತ ಸರ್ಕಾರ ರೂಪಿಸಿರುವ ವಿಶೇಷ ಯೋಜನೆಗಳೇನು ಹಾಗೂ ಇದಕ್ಕೆ ಮೀಸಲಿಸಿರುವ ವಿಶೇಷ ಅನುದಾನ ಎಷ್ಟು,

ಆ) ಈ ಬಾಬ್ತುಗೆ ನೀಡಿರುವ ಅನುದಾನ ಎಷ್ಟು, (ಜಿಲ್ಲಾವಾರು ವಿವರ ಒದಗಿಸುವುದು)

ಇ) ಸುವರ್ಣ ಕರ್ನಾಟಕ ವರ್ಷಾಚರಣೆ ಪ್ರಯುಕ್ತ ಜಿಲ್ಲಾ ಉತ್ಸವಗಳನ್ನು ನಡೆಸುವ ಉದ್ದೇಶ ಸರ್ಕಾರದ ಮುಂದೆ ಇದೆಯೇ,

ಈ) ಹಾಗಿದ್ದಲ್ಲಿ, ಚಿಕ್ಕಮಗಳೂರಿನಲ್ಲಿ ಚೈತ್ರಶ್ರೀ ಜಿಲ್ಲಾ ಉತ್ಸವ ನಡೆಸಲು ಸರ್ಕಾರ ಕೈಗೊಂಡ ಕ್ರಮಗಳೇನು,

ಉ) ಸುವರ್ಣ ಕರ್ನಾಟಕ ವರ್ಷಾಚರಣೆ ಪ್ರಯುಕ್ತ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಕೃತಿಗಳು ಹಾಗೂ ವಿಶ್ವಕೋಶ ಗ್ರಂಥವನ್ನು ಮನರ್ ಮುದ್ರಿಸುವ ಯೋಜನೆ ಸರ್ಕಾರದ ಮುಂದೆ ಇದೆಯೇ,

ಊ) ಹಾಗಿದ್ದಲಿ, ಈ ಗ್ರಂಥಗಳನ್ನು ವಿಶೇಷ ರಿಯಾಯಿತಿ ದರದಲ್ಲಿ ನೀಡುವ ಬಗ್ಗೆ ಸರ್ಕಾರ ಯೋಚಿಸಿದೆಯೇ?

ಶ್ರೀ ಹೆಚ್ ಎಸ್ ಮಹದೇವಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ಸುವರ್ಣ ಕರ್ನಾಟಕ ವರ್ಷಾಚರಣೆ ಅಂಗವಾಗಿ ರೂಪಿಸಿರುವ ವಿಶೇಷ ಯೋಜನೆಗಳೆಂದರೆ,

1 ಸುವರ್ಣ ಸಾಂಸ್ಕೃತಿಕ ಸಮುಚ್ಚಯಗಳು
2 ಸುವರ್ಣ ಸಾಂಸ್ಕೃತಿಕ ದರ್ಶಿಕೆ
3 ಸುವರ್ಣ ಸಮಿತಿ ಸಭೆಗಳು
4 ಸುವರ್ಣ ಕರ್ನಾಟಕ ಆಡಳಿತ/ಸಂಘಟನೆ
5 ಚಿತ್ರಶಿಲ್ಪಗಳ ಶಿಬಿರ ಹಾಗೂ ವಿಚಾರ ಸಂಕಿರಣ